# ನ್ಯಾಯದೇವತೆಗೆ ಭವ್ಯ ಮಂದಿರ

## 167 ಎಕರೆ ಪ್ರದೇಶದಲ್ಲಿ ರೂಪುಗೊಂಡಿರುವ ಜಾರ್ಖಂಡ್ ಹೈಕೋರ್ಟ್ ಸಂಕೀರ್ಣ



**ನೂತನ 'ಸಂಸತ್ ಭವನ'ದ ಆಸುಪಾಸಿನಲ್ಲಿಯೇ ಲೋಕಾರ್ಪಣೆಗೊಂಡಿರುವ ಜಾರ್ಖಂಡ್ ಹೈಕೋರ್ಟ್‌ನ ಹೊಸ ಕಟ್ಟಡ, ದೇಶದ ಭವ್ಯ ವಾಸ್ತುಶಿಲ್ಪಗಳ ಸಾಲಿಗೆ ಸೇರಿದೆ. ವಿಸ್ತೀರ್ಣದ ಹಿನ್ನೆಲೆಯಲ್ಲಿ 'ದೇಶದ ಬಹು ದೊಡ್ಡ ಹೈಕೋರ್ಟ್ ಸಂಕೀರ್ಣ' ಎನ್ನುವ ಹಿರಿಮೆ ಹೊಂದಿರುವ ಈ ವಾಸ್ತುಶಿಲ್ಪ, ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಜಾರ್ಖಂಡ್ ನೀಡಿರುವ ಕೊಡುಗೆ.**

**■ ಕೋಡಿಬೆಟ್ಟು ರಾಜಲಕ್ಷ್ಮಿ**
ಚಿತ್ರಗಳು: ವಿನಯ್ ಮುರ್ಮು, ರಾಂಚಿ



ಸ್ವಾತಂತ್ರ್ಯ ಸಂಭ್ರಮ

ಎರಡೂವರೆ ತಿಂಗಳ ಹಿಂದೆ, ಮೇ 28ರಂದು ಲೋಕಾರ್ಪಣೆಗೊಂಡ ಸಂಸತ್ ಭವನದ ನೂತನ ಕಟ್ಟಡ 'ಆಧುನಿಕ ಭಾರತ'ದ ಹೆಮ್ಮೆಯ ವಾಸ್ತುಶಿಲ್ಪಗಳಲ್ಲೊಂದು. ದೇಶದ ಸಂಸತ್ ಭವನ ತನ್ನ ಭವ್ಯತೆಯ ಮೂಲಕ ವಿಶ್ವದ ಗಮನ ಸೆಳೆಯುವುದು ಸಹಜವೇ. ಆದರೆ, ನೂತನ ಸಂಸತ್ ಭವನದ ಲೋಕಾರ್ಪಣೆಗೆ ನಾಲ್ಕು ದಿನಗಳ ಮೊದಲಷ್ಟೇ (ಮೇ 24) ಲೋಕಾರ್ಪಣೆಗೊಂಡ ಪುಟ್ಟ ರಾಜ್ಯವೊಂದರ ಭವ್ಯ ಕಟ್ಟಡ ಹೆಚ್ಚು ಸುದ್ದಿಯಾಗದೆ ಹೋಯಿತು. ಆ ಕಟ್ಟಡವೇ, ಜಾರ್ಖಂಡ್ ಹೈಕೋರ್ಟ್‌ನ ಹೊಸ ಕಟ್ಟಡ.

ಕಟ್ಟಡವೆಂದರೆ ಸರಿಹೋಗದು; ಕಟ್ಟಡ ಸಮುಚ್ಚಯವೆಂದರೆ ಅದಕ್ಕೆ ನ್ಯಾಯ ದೊರಕೀತು. ಸಂಸತ್ ಭವನವನ್ನು ರಾಷ್ಟ್ರಪತಿಗಳಿಂದ ಉದ್ಘಾಟಿಸದೆ ಹೋದುದರ ಬಗ್ಗೆ ಟೀಕೆ ಟಿಪ್ಪಣಿಗಳು ವ್ಯಕ್ತವಾದವಷ್ಟೇ. ಆದರೆ, ಜಾರ್ಖಂಡ್ ಹೈಕೋರ್ಟ್‌ನ ನೂತನ ಕಟ್ಟಡ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದಲೇ ಲೋಕಾರ್ಪಣೆಗೊಂಡಿತು.

ಈ ಕಟ್ಟಡದ ವಿಶೇಷ ಏನೆಂದಿರಾ? ಕೆಳಗಿನ ಅಂಕಿಅಂಶಗಳನ್ನು ಗಮನಿಸಿ:

- ಹೈಕೋರ್ಟ್ ಸಂಕೀರ್ಣದ ಒಟ್ಟು ವಿಸ್ತಾರ: ಸುಮಾರು 167 ಎಕರೆ.
- ಕಟ್ಟಡ ಸಮುಚ್ಚಯದ ವಿಸ್ತೀರ್ಣ: 72 ಎಕರೆ.
- ನಿರ್ಮಾಣ ವೆಚ್ಚ: 550 ಕೋಟಿ ರೂಪಾಯಿ.
- ವಕೀಲರು ಮತ್ತು ಗುಮಾಸ್ತರಿಗೆ ಸಭಾಂಗಣಗಳು: 4
- ಹಿರಿಯ ವಕೀಲರ ಕೊಠಡಿಗಳು: 4
- ವಕೀಲರ ಸಭಾಂಗಣವೊಂದರ ಆಸನ ಸಾಮರ್ಥ್ಯ: 1,660
- ಹಿರಿಯ ವಕೀಲರ ಕೊಠಡಿಗಳು: 76

ವಿಶೇಷಗಳು ಇನ್ನೂ ಇವೆ. ದಿನದಲ್ಲಿ ಹೆಚ್ಚು ಹೊತ್ತು ಕೋರ್ಟ್‌ನಲ್ಲಿಯೇ ಅಧ್ಯಯನ, ವಾದ, ಸಂವಾದಗಳಲ್ಲಿ ತೊಡಗುವವರು ದಣಿದಾಗ, ವಿಶ್ರಾಂತಿ ಪಡೆಯಲು ಮಹಿಳೆ ಮತ್ತು ಪುರುಷ ಸಿಬ್ಬಂದಿಗೆಂದು ಪ್ರತ್ಯೇಕ ವಿರಾಮ ಕೋಣೆಗಳಿವೆ. ಆಟೋಟಗಳಿಗೆ ಬೇಕಾದ ವ್ಯವಸ್ಥೆಯಿದೆ. ಸ್ವಚ್ಛತಾ ವ್ಯವಸ್ಥೆ, ಅಡುಗೆ ಮತ್ತು ಊಟದ ವ್ಯವಸ್ಥೆಗೆಂದು ನಿಗದಿಪಡಿಸಿದ ಸ್ಥಳಗಳಿವೆ.